Regd No Bo 155 22-10-1969

SATYAVADI Daily, MYSORE 4 ✱ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

9 ತಿಂಗಳಲ್ಲಿ 210 ಕೋಮುವಾರು ಘಟನೆಗಳು

ಆನೆ ಹಾವಳಿ

ಕೊಲ್ಲಾಪುರ— ಗ್ರೇಟ್ ಬಾಂಬೆ ಸರ್ಕಸ್ಸಿನ ಆನೆಯು ಊರೊಳಗಿನಿಂದ ಬರುತ್ತಿದ್ದಾಗ ಒಬ್ಬ ಅಜ್ಞಾನಿಯು ಅದಕ್ಕೆ ಒಂದು ದೊಡ್ಡ ಕಲ್ಲು ಹೊಡೆಯಲು ಅದು ರೇಗಿ ಬೆನ್ನಿನ ಮೇಲೆ ಕುಳಿತಿದ್ದ ಮಾಹುತನನ್ನು ಕೆಳಕ್ಕೆ ಎಳೆದು ಕೊಂದಿತು.

✱

ಪಾನನಿರೋಧ

ಹೈದರಾಬಾದು— ಮುಖ್ಯ ಮಂತ್ರಿ ಬ್ರಹ್ಮಾನಂದರೆಡ್ಡಿಯವರು ಆಂಧ್ರದಲ್ಲಿ ಪಾನನಿರೋಧ ತೆಗೆಯುವದನ್ನು ತೆಲಂಗಾಣಾ ನಾಯಕರು ಹೊರಾಟಕ್ಕೆ ಒಂದು ಅಂಶಮಾಡಿಕೊಳ್ಳಬೇಕೆಂದು ಅಖಿಲ ಭಾರತ ಪಾನನಿರೋಧ ಸಮಿತಿ ಅಧ್ಯಕ್ಷೆ ಡಾ ॥ ಸುಶೀಲ ನಯ್ಯಾರ್ ಹೇಳಿದರು.

○

ಖಾರಿಗೆ ಹೊಸ ಜೋಡು

ಅಹಮದಾಬಾದು— ಬಹಳ ಒತ್ತಾಯದ ಮೇಲೆ ಹೊಸ ಜೊತೆ ಜೋಡನ್ನು ಹೊಂದಲು ಕಡೆಗೆ ಖಾಕಿ ಅಬ್ದುಲ್ ಗಫಾರ್ ಖಾರು ಒಪ್ಪಿ, ಜೋಡುಹೊಲಿಯುತ್ತಿವವನಿಗೆ ಅಳತೆ ಕೊಟ್ಟರು.

✱

ಪತ್ರಿಕೆ ಬೆಲೆ ಹೆಚ್ಚಿತು

ಲಂಡನ್— ಟೈಮ್ಸ್ ಪತ್ರಿಕೆ ಬೆಲೆ 6 ಪೆನ್ನುಗಳಿಂದ 8 ಪೆನ್ನುಗಳಿಗೆ ಹೆಚ್ಚಿಸಲಾಯಿತು.

✱

ತಿರಸ್ಕಾರ

ಚಂಡೀಘರ— ಚಂಡಿಘರಕ್ಕಾಗಿ 66 ದಿನಗಳಿಂದ ಉಪವಾಸ ಮಾಡುತ್ತಿರುವ ಶ್ರೀ ಫೆರೂರ್ಮಾರನ್ನು ಉಪವಾಸ ನಿಲ್ಲಿಸಲು ಪ್ರಧಾನಿಯರು ಮಾಡಿದ ವಿನಂತಿಯನ್ನು ಅವರು ತಿರಸ್ಕರಿಸಿದರು.

ದೇವಸ್ಥಾನಕ್ಕೆ ಅಪಾಯ

ಮದರಾಸು— ಸಮುದ್ರವು ಭೂಮಿಗೆ ನುಗ್ಗಿ ಬರುತ್ತಿರುವದು ತಿರುನಲ್ವೇಲ್ಲಿ ಜಿಲ್ಲೆ ತಿರುಚಂಗೋಡಿನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ಅಪಾಯಕಾರಿಯಾಗಿದೆ — ಇದನ್ನು ತಪ್ಪಿಸಲು ದೇವಾಲಯದ ಪೂರ್ವಕ್ಕೆ ಕಲ್ಲಿನ ಗೋಡೆ ನಿರ್ಮಿಸಲು ದೇವಾಲಯದ ಆಡಳಿತದವರು ಕೇಂದ್ರ ಸರಕಾರಕ್ಕೆ ಮನವಿಮಾಡಿದ್ದಾರೆ.

●

ತಂದೆಯ ಕೊಲೆ

ದೇವನಹಳ್ಳಿ— ಅರದೇಶಹಳ್ಳಿಯ ಮುನಿಚನ್ನಪ್ಪನನ್ನು ತನ್ನ ತಂದೆ ಕೊಲೆ ಆಪಾದನೆಗೆ ದಸ್ತಗಿರಿ ಮಾಡಲಾಯಿತು.

○

ಬಸ್ ಅನಾಹುತ

ಜಯಪುರ— ಭರತಪುರದಿಂದ ಮೈಲಾರ್ ಪುರಕ್ಕೆ ಹೋಗುತ್ತಿದ ಬಸ್‌ಗೆ ಬೆಂಕಿ ಹತ್ತಿಕೊಂಡು 7 ಮಂದಿ ಸತ್ತರು.

★ ಅಂತರರಾಷ್ಟ್ರೀಯ ಅಂಪೈರುಗಳ ಸಂಘ ಸ್ಥಾಪನೆಯಾಗಬೇಕೆಂದು ಭಾರತದಲ್ಲಿ ಪ್ರವಾಸ ಮಾಡುತ್ತಿರುವ ನ್ಯೂಜಿಲೆಂಡು ಕ್ರಿಕೆಟ್ ಟೀಮಿನ ಮ್ಯಾನೇಜರ್ ಬುಗ್ರೆಸ್ ಹೇಳಿದರು.

ಅಲ್ಲಿ ಬಿರುಗಾಳಿ

ಮದರಾಸು— ಡೆಲ್ಲೀ ರಾಜಕೀಯ ಪರಿಸ್ಥಿತಿ ವಿವರಿಸುತ್ತಾ, ಮುಖ್ಯ ಮಂತ್ರಿ ಕರುಣಾನಿಧಿಯವರು—ಅಲ್ಲಿ ಭೀಕರ ಬಿರುಗಾಳಿ ಎಂದು ಹೇಳಿದರು.

○

ಕಾಂಗ್ರೆಸ್ ಒಂದು ರೈಲ್ವೇ ಪ್ಲಾಟ್‌ಫಾರಂ

ಬೊಂಬಾಯಿ— ಕಾಂಗ್ರೆಸ್ ಒಂದು ರೈಲ್ವೇ ಪ್ಲಾಟ್‌ಫಾರಂನಂತಿದ್ದು, ಅಲ್ಲಿ ಪಿಕ್‌ಪಾಕೆಟ್‌ಗಳೂ, ಕಾಳಸಂತೆಕೋರರೂ ಆಶ್ರಯ ಹೊಂದಿದ್ದಾರೆ, ಎಂದು ಶ್ರೀ ಜೆ. ಎಲ್. ಲೋಕೆ ಹೇಳಿದರು.

★

ಸತ್ಯ ಅಹಿಂಸೆ

ಈಗ ಗಾಂಧೀಜೀ ಭಾರತದಲ್ಲಿ ಕಾಣಿಸಿಕೊಂಡರೆ, ತಾವು ಒಬ್ಬ ಏರಕೇಯನಂತೆ ಭಾವನೆಹೊಂದುವರೆಂದೂ, ಈ ದೇಶದಲ್ಲಿ ಸತ್ಯ ಅಹಿಂಸೆ ಕೇಳಲ್ಪಡುತ್ತಿದೆಯೇ ಹೊರತು ಕಾಣಲ್ಪಡುತ್ತಿಲ್ಲವೆಂದೂ, ಕೇರಳ ಮುಖ್ಯ ನ್ಯಾಯಾಧೀಶ ಶ್ರೀ ನಾಯರ್ ನಾಯರ್ ಹೇಳಿದರು.

○ ಕನೆಬಾರ— ಆಸ್ಟ್ರೇಲಿಯ ಭಾರತಕ್ಕೆ 70000 ಟನ್ ಗೋಧಿ ಕೊಡುವದು.

ಕೋಮುವಾರು ಘಟನೆ

ನವದೆಹಲಿ — ಈ ವರ್ಷದ ಪ್ರಥಮ 9 ತಿಂಗಳಲ್ಲಿ ದೇಶದಲ್ಲಿ 210 ಕೋಮುವಾರು ಘಟನೆಗಳು ಸಂಭವಿಸಿವೆ.

●

ಮಲ್ಲಿಗೆ ಜಾಜಿ ಹೂ

ನವದೆಹಲಿ— ಮದರಾಸಿನಲ್ಲಿ ದಿನಕ್ಕೆ ರೂ 3 ಲಕ್ಷ ಬೆಲೆಯ ಮಲ್ಲಿಗೆ ಜಾಜಿ ಹೂವು ಮಾರಾಟವಾಗುತ್ತಿರುವದಾಗಿ ಪ್ರಕಟವಾಗಿದೆ.

✱

ಸಕ್ಕರೆ ಬೆಲೆ ಇಳಿತ

ಮದರಾಸು— ಬಹಿರಂಗ ಮಾರುಕಟ್ಟೆ ಸಕ್ಕರೆ ಬೆಲೆ ರೂ 137 ಕ್ಕೆ ಇಳಿದಿದ್ದು, ಗಿರಣಿಯವರಿಗೂ, ವರ್ತಕರಿಗೂ ಚಿಂತೆ ಹತ್ತಿದೆ.

●

ಬೆಂಬಲ

ಅನಂತಪುರ— ಆಂಧ್ರ ಸರಕಾರ ಪಾನನಿರೋಧವನ್ನು ನವೆಂಬರು 1 ರಿಂದ ರದ್ದು ಪಡಿಸುವದಕ್ಕೆ ಪಿಎಸ್ಪಿ ಕಾರ್ಯದರ್ಶಿ ರಾಮಚಂದ್ರ ರೆಡ್ಡಿಯವರು ಬೆಂಬಲಿಸಿರುವರು.

★

ಎರಡು ಗುಂಪುಗಳಲ್ಲೂ ಚಟುವಟಿಕೆ

ನವದೆಹಲಿ— ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಇನ್ನು 10 ದಿನಗಳಲ್ಲಿ ನಡೆಯಲಿದೆ — ಪ್ರಧಾನಿ ಮತ್ತು ಕಾಂಗ್ರೆಸ್ ಅಧ್ಯಕ್ಷರ ಪರದವರು ತಮ್ಮ ತಮ್ಮ ಕಡೆ ಹೆಚ್ಚು ಬೆಂಬಲ ಪಡೆಯುವ ಚಟುವಟಿಕೆ ಪ್ರಾರಂಭಿಸಿರುವರು.

○ ಶಿವಮೊಗ್ಗಾ— ಸರ್ಕಾರಿ ಭೂಮಿಗೆ ಅತಿಕ್ರಮ ಪ್ರವೇಶಿಸಿದ ಆಪಾದನೆಗೆ ಎಸ್ಪಿಸ್ಪಿ ನಾಯಕ ಶ್ರೀ ಗೋಪಾಲಗೌಡ ಮತ್ತಿತರ 33 ಮಂದಿಗೆ ಕೋರ್ಟು ಏಳುವವರೆಗೆ ಶಿಕ್ಷೆ ವಿಧಿಸಲಾಯಿತು.

ತಾ.24-10-69'ನೇ ಶುಕ್ರವಾರದಿಂದ ಪ್ರಮೋಷ

... ದಿನ 3 ಆಟಗಳು .... ಪ್ರಾರಂಭ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ

ದಿನ : 2-30, 6 ಮತ್ತು 9-30 ಕ್ಕೆ ದಿನ : 3, 6-30, 10 ಕ್ಕೆ

ಟೋನಿವಾಕರ್‌ರವರ ವರ್ಣದ ಅತ್ಯುನ್ನತ ಪತ್ತೇದಾರಿ, ಸಂಗೀತಭರಿತ

ವರ್ಣರಂಜಿತ ಚಿತ್ರ ಬಾ ಜಿ (ಹಿಂದಿ)

ಪಾತ್ರ— ಧರ್ಮೇಂದ್ರ, ವಹಿದಾ ರೆಹಮಾನ್, N.A. ಅನ್ಸಾರಿ, ಮತ್ತು ಜಾನಿವಾಕರ್

ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ — ನಿರ್ದೇಶನ: ಮೋನಿ ಭಟ್ಟಾಚಾರ್ಯಜೀ

ವೈಭವ ಜಂಬೂಸವಾರಿ

ಮೈಸೂರು— ಲೋಕವಿಖ್ಯಾತ ಜಂಬೂಸವಾರಿ ಮೆರವಣಿಗೆ ಸೋಮವಾರ ವೈಭವವಾಗಿ ನಡೆಯಿತು. ಹೊಸ ಅಂಬಾರಿ ಆನೆಯ ಮೇಲೆ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರೂ, ಅವರ ಪುತ್ರ ಶ್ರೀಕಂಠದತ್ತ ನರಸಿಂಹರಾಜ ಒಡೆಯರವರೂ, ಅವರ ಸೋದರಮಾವ ಶ್ರೀ ದೇವರಾಜ ಅರಸಿನವರೂ ಕುಳಿತಿದ್ದರು. ಶ್ರೀಮನ್ಮಹಾರಾಜರಿಗೆ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹಾರ ಅರ್ಪಿಸಿದರು. 21 ಕುಶಾಲ ತೋಪು ಹಾರಿಸಲಾಯಿತು. ಹೊರಗಿನ ರಾಜ್ಯಸಾಲರೂ ಮತ್ತು ಅನೇಕ ವಿದೇಶೀ ರಾಯಭಾರಿಗಳೂ ಮೆರವಣಿಗೆ ವೀಕ್ಷಿಸಿದರು. ದಾರಿಯುದ್ದಕ್ಕೂ ಜನ ನಿಂತಿದ್ದು ಜಯಘೋಷ ಮಾಡುತ್ತಿದ್ದರು. ಮೂರು ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಿಸಿದರು.

ಮೆರವಣಿಗೆಯಲ್ಲಿದ್ದ ಮೇಲುಕೋಟಿ ಮಹಾತ್ಮೆ, ಕೃಷ್ಣದೇವರಾಯ, ಮಂಗಳೂರು ಅಬ್ಬಕ್ಕದೇವಿ, ಹಕ್ಕಬುಕ್ಕರಿಗೆ ವಿದ್ಯಾರಣ್ಯರ ಆಶೀರ್ವಾದ ಮುಂತಾದ ಮೂಕ ದೃಶ್ಯಗಳು ಒಳ್ಳೆಯ ಆಕರ್ಷಣೀಯವಾಗಿದ್ದವು.

ಬನ್ನಿ ಮಂಟಪದಲ್ಲಿ ಪೂಜೆ, ಆಕರ್ಷಕ ಪೈರೇಡು ನಂತರ, ಶಾಲಂಕೃತ ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿದ್ದ ವಾಪಸ್ ಮೆರವಣಿಗೆಯು ಅರಮನೆಯನ್ನು ರಾತ್ರಿ 10-30 ಕ್ಕೆ ತಲಪಿತು.

★

ದಸರಾ ಬಿರುದುಗಳು

ಮೈಸೂರು— ದಸರಾ ಸಂಬಂಧದಲ್ಲಿ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರು— ಶ್ರೀ ಸುತ್ತೂರು ಮಠದ ಶ್ರೀ ರಾಜೇಂದ್ರ ಸ್ವಾಮಿಗಳಿಗೆ 'ರಾಜಗುರು ತಿಲಕ' ಎಂಬ ಬಿರುದನ್ನೂ, ಶ್ರೀ ವಿ ಆರ್ ನಾಯಿಡುರಿಗೆ 'ಲೋಕಸೇವಾನಿರತ' ಎಂಬ ಬಿರುದನ್ನೂ ದಯಪಾಲಿಸಿರುವರು. ಶ್ರೀ ಡಿ ಜಿ ಬಾಲರಾಜ್ (ಎಕ್ಸೈಜು ಕಮಿಷನರ್ ಮತ್ತು ಕಾರ್ಯದರ್ಶಿ), ಶ್ರೀ ಎಂ ಎಸ್ ನಾರಾಯಣಸ್ವಾಮಿ (ಹುಜೂರು ಸೆಕ್ಶಿಟರಿ), ಶ್ರೀ ಧರಣಿಪಾಲಂ (ವೇಟಿಂಗ್ ಬೆಕ್ಷಿ), ಶ್ರೀ ಗೋಪಾಲರಾಜೇ ಅರಸ್ (ದರ್ಬಾರು ಒಕ್ಷಿ), ಶ್ರೀ ನಾಗರಾಜಪ್ಪ (ಅರಮನೆ ಅಡ್ವೊಕೇಟ್), ಡಾ|| ಕೆ ಜಿ ದಾಸ್ (ಕೆ ಆರ್ ಆಸ್ಪತ್ರೆ) ಇವರೂ ಬಿರುದುಗಳನ್ನೂ ಪಡೆದರು.

ವುಡ್‌ಲಾಂಡ್ ತಾ.10-10-69 ರಿಂದ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನೀವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೆರಾ— 10-10-69 ರಿಂದ
.... ಅಮೋಘ ತಮಿಳು ಚಿತ್ರ ....
ಎಂಗವೀಟ್ಟು ಪಿಳ್ಳೈ
ಪಾತ್ರ— ಎಂ. ಜಿ. ಆರ್ ಬಿ. ಸರೋಜಾದೇವಿ ಎಸ್. ವಿ. ರಂಗರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)
ದಿನ 3 ಆಟಗಳು

Help The Gorakshana

ಗೋರಕ್ಷಣೆ ಮತ್ತು ಪಶ್ಚಿಮದಲ್ಲಿ ಉಂಟಾಗಿರುವ ಹಬ್ಬಕ್ಕಾಗಿ ನಡೆಯುವ
ಗೋರಕ್ಷಣಾರ್ಥ ಬೆಂಬಲ ನೀಡಿ
Protect the Cow

ಪ್ರತಿಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲೆ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆರೂ. 2

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

SHAKTI
SUDHA
A Superb Tonic

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajanagar, Mysore